ಕರ್ನಾಟಕ ಸರ್ಕಾರ
ಆಯುಕ್ತರಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗರಸ್ತೆ, ಬೆಂಗಳೂರು-01

ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಇವಿಜಿ/ಕ.ಚೇ/ಮೌಲ್ಯಾಂಕನ/2021-22 ದಿನಾಂಕ: 28-04-2022

## ಜ್ಞಾಪನಾ

ವಿಷಯ: 2022-23 ನೇ ಶೈಕ್ಷಣಿಕ ಸಾಲಿನಲ್ಲಿಕರ್ನಾಟಕರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ 4 ನೇ ತರಗತಿಯಿಂದ10 ನೇ ತರಗತಿ ವಿದ್ಯಾರ್ಥಿಗಳ ಮೌಲ್ಯಾಂಕನ ನಡೆಸುವ ಬಗ್ಗೆ.

ಉಲ್ಲೇಖ: 1. ಆಯುಕ್ತರ ಕಛೇರಿ ಸಾ.ಶಿ.ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಸಿ4(6)ಶೈ.ವ.ಪ್ರಾ-01/2022-23 ದಿನಾಂಕ: 20.04.2022

2. ಆಯುಕ್ತರ ಕಛೇರಿ ಸಾ.ಶಿ.ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು 2022-23 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ಕಾರ್ಯಸೂಚಿಯ ಅನುಬಂಧ-1 (Signed on 20-04-2022)

3. ಆಯುಕ್ತರ ಸುತ್ತೋಲೆ ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇವಿಜಿ/2022-23ಅಹಾ/32/2021-22 ದಿನಾಂಕ: 04.03.2022

4. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,ಶಿಕ್ಷಣ ಇಲಾಖೆ,(ಪ್ರಾಥಮಿಕ ಮತ್ತು ಪ್ರೌಢ)ರವರ ಅಧ್ಯಕ್ಷತೆಯಲ್ಲಿ ದಿನಾಂಕ: 25-03-2022 ರಂದು ನಡೆದ ಕಲಿಕಾ ಚೇತರಿಕೆ ಕೋರ್ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ.

***************

2020-21 ಹಾಗೂ 2021-22 ನೇ ಶೈಕ್ಷಣಿಕ ಸಾಲಿನಲ್ಲಿ ಕೋವಿಡ್-19 ರ ಪರಿಣಾಮವಾಗಿ ಮಕ್ಕಳಿಗೆ ಕಲಿಕಾ ನಷ್ಟವಾಗಿದ್ದು, ಸದರಿ ನಷ್ಟ ಸರಿದೂಗಿಸಿ ಮಕ್ಕಳ ಕಲಿಕಾ ಅಂತರ ನಿವಾರಿಸಿ ಕಲಿಸಲು ರಾಜ್ಯ ಸರ್ಕಾರ ಕಲಿಕಾ ಚೇತರಿಕೆ ಉಪಕ್ರಮವನ್ನು ರೂಪಿಸಿರುತ್ತದೆ. ಈ ಬಗ್ಗೆ ತರಬೇತಿ ಸಾಹಿತ್ಯ, ಮಕ್ಕಳ ಕಲಿಕಾ ಹಾಳೆಗಳು ಮತ್ತು ಶಿಕ್ಷಕರ ಕೈಪಿಡಿ ರೂಪಿಸಿ ತಮ್ಮೊಂದಿಗೆ ಹಂಚಿಕೊಳ್ಳಲಾಗುತ್ತದೆ. ತರಬೇತಿಗಳನ್ನೂ ನೀಡಲಾಗುತ್ತಿದೆ. ಈ ಅವಧಿಯಲ್ಲಿ ನಿರ್ವಹಿಸಬೇಕಾದ ಶೈಕ್ಷಣಿಕ ಮೌಲ್ಯಾಂಕನ, ಮೌಲ್ಯ ಮಾಪನ ಕಾರ್ಯ ಚಟುವಟಿಕೆಗಳ ಬಗ್ಗೆ ಶಾಲೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಉದ್ದೇಶದಿಂದ ಈ ಕೆಳಗಿನ ಅಂಶಗಳನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ನೀಡಲಾಗಿದೆ.

ಉಲ್ಲೇಖ-2 ರಲ್ಲಿ ತಿಳಿಸಿದಂತೆ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಪಠ್ಯಪುಸ್ತಕವನ್ನು ಒಂದು ಪೂರಕ ಸಾಮಗ್ರಿಯನ್ನಾಗಿ ಉಪಯೋಗಿಸಿಕೊಂಡು, ಈ ಸಾಲಿನಲ್ಲಿ ಅಭಿವೃದ್ಧಿಪಡಿಸಿದ ಕಲಿಕಾ ಹಾಳೆಗಳ ಅನ್ವಯ ಹಂಚಿಕೆ ಮಾಡಿಕೊಂಡು ಮಕ್ಕಳ ಕಲಿಕೆಯನ್ನು ಅನುಕೂಲಿಸುತ್ತಾ ಶಾಲಾಧಾರಿತ ಮೌಲ್ಯಾಂಕನ ಕೈಗೊಂಡು ಮಕ್ಕಳ ಕಲಿಕೆಯನ್ನು ದಾಖಲಿಸಿಕೊಳ್ಳಬೇಕಿದೆ. ಪ್ರಸ್ತುತ ಅಭಿವೃದ್ಧಿಪಡಿಸಿರುವ ಕಲಿಕಾ ಹಾಳೆಗಳನ್ನು ಕಲಿಕೆ ಮುಂದುವರಸುವಂತೆ ತಯಾರಿಸಲಾಗಿದೆ.

ಈಗಾಗಲೇ ಉಲ್ಲೇಖ(1) ರಂತೆ 2022-23 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ಕಾರ್ಯಸೂಚಿ ಹೊರಬಂದಿರುವ ಹಿನ್ನೆಲೆಯಲ್ಲಿ ಶಾಲೆಯು 2022-23 ನೇ ಸಾಲಿನಲ್ಲಿ ಕಲಿಕಾ ಚೇತರಿಕೆ, ಪಠ್ಯವಸ್ತು ಬೋಧನ, ಮೌಲ್ಯಾಂಕನ ಕುರಿತು ವಹಿಸಬೇಕಾದ ಕ್ರಮಗಳನ್ನು ಈ ಮುಂದಿನಂತೆ ಸೂಚಿಸಿ ಪಟ್ಟಿಮಾಡಿದೆ.

1. ಶಾಲೆ ಪ್ರಾರಂಭೋತ್ಸವ, ಪೂರ್ವಭಾವಿ ಸಭೆಗಳು, ವಿವಿಧ ಹಂತದ ತರಬೇತಿ ಮತ್ತು ಸಭೆಗಳಲ್ಲಿ 'ಕಲಿಕಾ ಚೇತರಿಕೆ' ಉಪಕ್ರಮ ಪರಿಚಯಿಸಿ, ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳುವುದು.
2. 17-05-2022 ರಿಂದ ಕಲಿಕಾ ಚೇತರಿಕೆ ವರ್ಷದ ಅನುಷ್ಠಾನ ಕಳೆದ ವರ್ಷದ ದತ್ತಾಂಶದೊಂದಿಗೆ, ಸಿದ್ಧಗೊಂಡ ಕಲಿಕಾ ಹಾಳೆಗಳನ್ನು ತರಗತಿವಾರು ಮತ್ತು ವಿಷಯವಾರು, ತರಗತಿಗಳಲ್ಲಿ ಬಳಸುವುದು. ಇದಕ್ಕಾಗಿ ಸಿದ್ಧಪಡಿಸಿದ ಶಿಕ್ಷಕರ ಕೈಪಿಡಿಯನ್ನು ಮನನ ಮಾಡಿಕೊಳ್ಳುವುದು.
3. ಮೌಲ್ಯಾಂಕನದ ಭಾಗವಾಗಿ 2022-23ನೇ ಸಾಲಿನಲ್ಲಿ 4 FA ಗಳು, 2 SA ಗಳನ್ನು ನಿರ್ವಹಿಸಲು ಕಾರ್ಯಸೂಚಿಯಲ್ಲಿ ನಿಗದಿಗೊಳಿಸಿದ್ದು, ಮೊದಲನೇ FA – ಆಯಾ ತರಗತಿಗೆ ನಿಗದಿಗೊಳಿಸಿದ, ವಿಷಯವಾರು LO (ಕಲಿಕಾ ಫಲಗಳ) ಶೇ25ರಷ್ಟನ್ನು ಪರಿಗಣಿಸುವುದು.ಇದೇ ರೀತಿ ಉಳಿದ FA ಗಳಿಗೂ ಶೇಕಡಾ 25 ರಷ್ಟು LO ಗಳನ್ನು ಪರಿಗಣಿಸುವುದು.ಇದಕ್ಕೆ ಸಂಬಂಧಿಸಿದ ಕಲಿಕಾ ಹಾಳೆಗಳಲ್ಲಿನ ಚಟುವಟಿಕೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವುದನ್ನು ಆಧರಿಸಿ ಗ್ರೇಡ್ ಗಳನ್ನು ನಿರ್ಧರಿಸಿ ದಾಖಲಿಸುವುದು. ಉದಾಹರಣೆಗೆ 8 ಚಟುವಟಿಕೆಗಳಲ್ಲಿ ಎಷ್ಟು ಶೇ ಚಟುವಟಿಕೆ ಪೂರ್ಣಗೊಂಡಿದೆ ಎಂಬುದನ್ನು ಆಧರಿಸಿ ಇದನ್ನು ನಿರ್ಧರಿಸುವುದು. ಕೃತಿ ಸಂಪುಟಕ್ಕೆ ಸಂಬಂಧಿಸಿದ ಕಲಿಕಾ ಹಾಳೆಗಳನ್ನು ಲಗತ್ತಿಸುವುದು. ಇದೇ ರೀತಿ 2,3,4 ನೇ FA ಗಳ ಗ್ರೇಡ್ ಗಳನ್ನು ಕೂಡ ವಾರ್ಷಿಕ ಕಾರ್ಯಸೂಚಿಯಲ್ಲಿ ತಿಳಿಸಿರುವ ಸಮಯದಲ್ಲಿ ನಿರ್ಧರಿಸಿ ದಾಖಲಿಸುವ ಕ್ರಮ ಕೈಗೊಳ್ಳಬೇಕು.
4. SA 1 ಮತ್ತು SA 2 ನ್ನು ಈ ಸಾಲಿನಲ್ಲಿ ನಿರ್ವಹಿಸುವಾಗ, ಆಯಾತರಗತಿ ಮತ್ತು ವಿಷಯದ ಶೇ 50 LO (ಕಲಿಕಾ ಫಲ)ಗಳನ್ನು ಆಧರಿಸಿ ನಿರ್ವಹಿಸಬೇಕು. ವಿದ್ಯಾರ್ಥಿಗಳ ಕಲಿಕಾವೇಗಕ್ಕೆ ಅನುಗುಣವಾಗಿ ಲೆವೆಲ್-1 (ಎಲ್ಲಾLO ಗಳನ್ನು ಸಾಧಿಸಿದ ವಿದ್ಯಾರ್ಥಿಗಳಿಗೆ) ಮತ್ತು ಲೆವೆಲ್-2 (ನಿಗದಿಗೊಳಿಸಿರುವುದಕ್ಕಿಂತ ಕಡಿಮೆ LO ಗಳನ್ನು ಸಾಧಿಸಿರುವ ವಿದ್ಯಾರ್ಥಿಗಳಿಗೆ) ರೀತಿ ಬೇರೆ ಬೇರೆ ಸಾಧನಗಳನ್ನು ಬಳಸಬಹುದು. (ಉದಾಹರಣೆಗೆ SA 1 ಕ್ಕೆ 8 LO ಗಳು ನಿಗದಿ ಆಗಿದ್ದಾಗ ಲೆವೆಲ್-1 ಎಲ್ಲಾ 8 LO ಗಳನ್ನು ಒಳಗೊಂಡ ಸಾಧನದಿಂದ ಮೌಲ್ಯಾಂಕನ ಮಾಡಲಾಗುವುದು. ಲೆವೆಲ್-2 8 ರಲ್ಲಿ ಸಾಧಿತವಾಗಿರುವ 4 LO ಗಳನ್ನು ಮಾತ್ರ ಸಾಧನ ತಯಾರಿಯಲ್ಲಿ ಪರಿಗಣಿಸುವುದು. ಯಾವ ವಿದ್ಯಾರ್ಥಿಗೆ ಯಾವ ಸಾಧನ (ಲೆವೆಲ್-1 ಅಥವಾ 2) ಎಂಬುದನ್ನುಆಯಾ ವಿಷಯ ಶಿಕ್ಷಕರು ನಿರ್ಧರಿಸಿ ಮೌಲ್ಯಾಂಕನ ನಡೆಸಬೇಕು. ಅದನ್ನು

ಆಧರಿಸಿ ಗ್ರೇಡ್ ನಮೂದಿಸಬೇಕು. ಪ್ರಗತಿ ಪತ್ರದಲ್ಲಿ ಈ ಗ್ರೇಡ್ ಗಳನ್ನು ನಮೂದಿಸಿ ಪೋಷಕರೊಂದಿಗೆ ಹಂಚಿಕೊಳ್ಳಬೇಕು. ಸಮುದಾಯದತ್ತ ಶಾಲ ಕಾರ್ಯಕ್ರಮದಲ್ಲಿ ಪೋಷಕರಿಗೆ ವಿದ್ಯಾರ್ಥಿಗಳ ಕೃತಿ ಸಂಪುಟ ಪ್ರದರ್ಶಿಸಿ ಹಿಮ್ಮಾಹಿತಿ ಒದಗಿಸಬಹುದು.

5. ಶಿಕ್ಷಕರು 2022-23 ನೇ ಸಾಲಿನಲ್ಲಿ ಕಲಿಕಾ ಚೇತರಿಕೆಉಪಕ್ರಮ ಅನುಷ್ಠಾನಕ್ಕೆ, ಪಾಠಯೋಜನೆ/ಟಿಪ್ಪಣಿಯಲ್ಲಿ ಕಲಿಕಾ ಹಾಳೆಗಳಲ್ಲಿನ ಚಟುವಟಿಕೆಗಳನ್ನು ಆಧರಿಸಿ ಸಿದ್ಧಪಡಿಸಿಕೊಳ್ಳಬೇಕು. ಅವರು ಶಿಕ್ಷಕರ ವಾರ್ಷಿಕ ಕಾರ್ಯಯೋಜನೆಯನ್ನು ಸಹ, ಆಯಾ ತರಗತಿ ಮತ್ತು ವಿಷಯವಾರು ಕಲಿಕಾ ಹಾಳೆಗಳನ್ನು ಪರಿಗಣಿಸಿ ಸಿದ್ಧಪಡಿಸಿಕೊಳ್ಳಬೇಕು.

6. 2022-23 ನೇ ಸಾಲಿನ ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ವಾರ್ಷಿಕ ಕಾರ್ಯ ಸೂಚಿಯಲ್ಲಿ ನಿಗದಿಗೊಳಿಸಿರುವಂತೆ ಚಟುವಟಿಕೆ ಬ್ಯಾಂಕ್ ಬಳಸಿ ಬ್ಯಾಗ್‌ರಹಿತ ದಿನದ ಚಟುವಟಿಕೆಗಳನ್ನು ಆಯೋಜಿಸುವಾಗ ಕಲಿಕಾ ಚೇತರಿಕೆ-ಕಾರ್ಯಕ್ರಮದ ಕಲಿಕಾ ಹಾಳೆಗಳಲ್ಲಿ ವಿದ್ಯಾರ್ಥಿ ಪಡೆಯುತ್ತಿರುವ ಅನುಭವಗಳ ವಿಸ್ತರಿತ ರೂಪದಲ್ಲಿ ಚಟುವಟಿಕೆ ಆಯ್ಕೆ ಮಾಡಿ ನಿರ್ವಹಿಸಬೇಕು.

7. ಕಲಿಕಾ ಚೇತರಿಕೆ ಕಾರ್ಯಕ್ರಮದಲ್ಲಿ ವಿತರಿಸುತ್ತಿರುವ ಕಲಿಕಾ ಹಾಳೆಗಳಲ್ಲಿನ ಆರಂಭಿಕ ಚಟುವಟಿಕೆಗಳು, ಕಳೆದ ಎರಡು ವರ್ಷಗಳಲ್ಲಿ ವಿದ್ಯಾರ್ಥಿಗಳು ಗಳಿಸಬೇಕಾಗಿರುವ LO (ಕಲಿಕಾ ಫಲ) ಗಳಿಗೆ ಸಂಬಂಧಿಸಿರುವುದರಿಂದ ಇವುಗಳೇ ಸೇತುಬಂಧವಾಗಿ ಬೆಂಬಲಿಸುತ್ತದೆ.

8. 10 ನೇ ತರಗತಿಗೆ ಈ ಹಿಂದಿನ ಸಾಲುಗಳಲ್ಲಿ ನಿರ್ವಹಿಸುತ್ತಿದ್ದ ರೀತಿಯಲ್ಲಿ ಸೇತುಬಂಧ ಕಾರ್ಯಕ್ರಮವನ್ನು ನಿರ್ವಹಿಸಬೇಕು. ಇದಕ್ಕೆ ಪೂರಕವಾಗಿ ಒಂದು ತಿಂಗಳ ಸೇತುಬಂಧ ಸಾಹಿತ್ಯವನ್ನು ವಿಷಯವಾರು ಒದಗಿಸಲಾಗುತ್ತಿದೆ. ಇದನ್ನು ಬಳಸಿ ಸೇತುಬಂಧ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು.

9. ಶಾಲಾ ಪ್ರಾರಂಭಿಕ ದಿನಗಳು ಮತ್ತು ಜೂನ್ ತಿಂಗಳಲ್ಲಿ ಕಲಿಕಾ ಕೊರತೆ ಅಥವಾ ಪ್ರಗತಿ ತಿಳಿಯಲು ನೈದಾನಿಕ ಪರೀಕ್ಷೆಗಳನ್ನು ಕೈಗೊಳ್ಳಲು, LO ಆಧಾರಿತ ಕಲಿಕಾ ಹಾಳೆಗಳೇ ಸಹಕರಿಸುವುದರಿಂದ ಅವುಗಳಲ್ಲಿನ ಚಟುವಟಿಕೆಗಳನ್ನು ಬಳಸಬಹುದು. ಇನ್ನೂ ಹೆಚ್ಚಿನ ಕಲಿಕಾ ಕೊರತೆಗಳು ಕಂಡು ಬಂದಲ್ಲಿ ಶಾಲೆಯಲ್ಲಿರುವ ವಿವಿಧ ಶೈಕ್ಷಣಿಕ ಕ್ಲಬ್ ಗಳನ್ನು ಬಳಸಿ ಕಲಿಕೆಗೆ ಸುಗಮಗೊಳಿಸುವುದು.

10. ಈ ಶೈಕ್ಷಣಿಕ ವರ್ಷದಲ್ಲಿ ಶಾಲೆಯು ಶೈಕ್ಷಣಿಕ ಮಾರ್ಗದರ್ಶನಕ್ಕೆ CRP,BRP, BRC ಮತ್ತು DIET ಗಳ ಜತೆ ಪರಿಣಾಮಕಾರಿ ಸಂಪರ್ಕ ಹೊಂದಿ ಪ್ರಯೋಜನ ಪಡೆಯುವುದು. ಶಾಲಾ ಭೇಟಿಗೆ ಬರುವ ಮಾರ್ಗದರ್ಶಿ, ಉಸ್ತುವಾರಿಅಧಿಕಾರಿ/ಸಿಬ್ಬಂದಿಗಳ ಜತೆ ಸಮಾಲೋಚಿಸಿ ಮಕ್ಕಳ ನಿರಂತರ ಕಲಿಕೆಯನ್ನು ಖಾತ್ರಿಪಡಿಸಿಕೊಳ್ಳುವುದು.

1 ರಿಂದ 9 ನೇ ತರಗತಿಗಳಿಗೆ ಮೌಲ್ಯಾಂಕನ ನಿರ್ವಹಣೆಯ ವೇಳಾಪಟ್ಟಿ :

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದಅವಧಿ |
|---|---|---|
| ನೈದಾನಿಕ ಅವಲೋಕನ ಮತ್ತು ಪ್ರಗತಿ ದಾಖಲು: ಪ್ರಸ್ತುತ ಸಾಲಿನಲ್ಲಿ ನೈದಾನಿಕ ಲಿಖಿತ ಪರೀಕ್ಷೆ ಇರುವುದಿಲ್ಲ. ನೈದಾನಿಕಚರ್ಚೆ, ಓದು, ಬರೆಹದ ಮೂಲಕ ಮೊದಲ ವಾರದಲ್ಲಿ ಮಕ್ಕಳ ಪ್ರಗತಿಯನ್ನು ಗಮನಿಸಿ. ಈ ನೈದಾನಿಕಅವಲೋಕನದ ಮೂಲಕ ಮಕ್ಕಳ ಪ್ರಗತಿಯನ್ನು ದಾಖಲಿಸಿಕೊಳ್ಳಿ. ಭಾಷೆ ಮತ್ತುಗಣಿತದಲ್ಲಿಅವರ ಮೂಲಭೂತ ಕಲಿಕಾ ಪ್ರಗತಿಯ ಅವಲೋಕನಕ್ಕೆ ಹೆಚ್ಚು ಒತ್ತು ನೀಡಿರಿ.<br>ಕಲಿಕಾ ನಷ್ಟ ಅಥವಾ ಅಂತರದ ಕಾರಣಕ್ಕಾಗಿಯೇ ಕಲಿಕಾ ಹಾಳೆಗಳನ್ನು ಮಾಡಲಾಗಿರುವುದರಿಂದ ನೈದಾನಿಕ ಅವಲೋಕನಕ್ಕಾಗಿ ಮೊದಲ ಒಂದು ವಾರ ಕಲಿಕೆಯ ಮೂಲಭೂತ ಅಂಶಗಳ ಪುನರ್ಬಲನದ ಕೆಲಸ, ಮಕ್ಕಳ ಮನ ಗೆಲ್ಲುವ ಮತ್ತು ಮಾನಸಿಕ, ಭಾವನಾತ್ಮಕ ಸುರಕ್ಷತೆ ನೀಡುವ ಕೆಲಸ ನಿರ್ವಹಿಸಬೇಕಾಗುತ್ತದೆ. | ----------- | ಶಾಲಾ ಆರಂಭದ ಮೊದಲನೆಯ ವಾರ |
| **ರೂಪಣಾತ್ಮಕ ಮೌಲ್ಯಾಂಕನ -1**<br>ಮೊದಲನೇ FA – ಆಯಾ ತರಗತಿಗೆ ನಿಗದಿಗೊಳಿಸಿದ, ವಿಷಯವಾರು LO (ಕಲಿಕಾ ಫಲಗಳ) ಶೇ25ರಷ್ಟನ್ನು ಪರಿಗಣಿಸುವುದು.<br>ಕಲಿಕಾ ಹಾಳೆಗಳು ಮೌಲ್ಯಾಂಕನದ ಆಕರಗಳಾಗಿ ಬಳಸುವಂತೆ ತಯಾರಿಸಿದೆ. ಹಾಗೆಯೇ ಕೃತಿಸಂಪುಟಕ್ಕೆ ಅವುಗಳನ್ನು ನೇರವಾಗಿ ಸಂಗ್ರಹಿಸುವಂತೆಯೂ ತಯಾರಿಸಿದೆ. ಅವುಗಳನ್ನು ಸಂಗ್ರಹಿಸಿ, ಅವಲೋಕಿಸಿ 15 ಅಂಕಗಳಿಗೆ ದತ್ತಾಂಶಗಳನ್ನು ಕ್ರೋಢೀಕರಿಸಿರಿ. ಮಕ್ಕಳ ಪ್ರಗತಿಗೆ ಆಧಾರಾಂಶಗಳು ಕಲಿಕಾ ಹಾಳೆಗಳ ಚಟುವಟಿಕೆಗಳು ಆಗಿರುತ್ತವೆ. 9 ನೇ ತರಗತಿಗೆ ಅಗತ್ಯವೆನಿಸಿದಲ್ಲಿ ಪುಟ್ಟ ಲಿಖಿತ ಪರೀಕ್ಷೆಯನ್ನೂ ರೂಪಣಾತ್ಮಕ ಮೌಲ್ಯಾಂಕನದ ಭಾಗವಾಗಿ ಮಾಡಬಹುದು. | 15 | 18-07-2022<br>ರಿಂದ<br>20-07-2022 |

| | | |
|---|---|---|
| **ರೂಪಣಾತ್ಮಕ ಮೌಲ್ಯಾಂಕನ -2**<br>ಮೊದಲನೇ FAಮಾದರಿಯಲ್ಲಿಯೇ<br>ಎರಡನೇ FA - ಆಯಾ ತರಗತಿಗೆ<br>ನಿಗದಿಗೊಳಿಸಿದ,ವಿಷಯವಾರು LO (ಕಲಿಕಾ ಫಲಗಳ) ಶೇ25ರಷ್ಟನ್ನು ಪರಿಗಣಿಸುವುದು.<br>ಕಲಿಕಾ ಹಾಳೆಗಳು ಮೌಲ್ಯಾಂಕನದ ಆಕರಗಳಾಗಿ ಬಳಸುವಂತೆ ತಯಾರಿಸಿದೆ. ಹಾಗೆಯೇ ಕೃತಿಸಂಪುಟಕ್ಕೆ ಅವುಗಳನ್ನು ನೇರ ಸಂಗ್ರಹಿಸುವಂತೆಯೂ ತಯಾರಿಸಿದೆ. ಅವುಗಳನ್ನು ಸಂಗ್ರಹಿಸಿ, ಅವಲೋಕಿಸಿ 15 ಅಂಕಗಳಿಗೆ ದತ್ತಾಂಶಗಳನ್ನು ಕ್ರೋಢೀಕರಿಸಿರಿ. ಅಗತ್ಯವೆನಿಸಿದಲ್ಲಿ ಪುಟ್ಟ ಲಿಖಿತ ಪರೀಕ್ಷೆಯನ್ನು ರೂಪಣಾತ್ಮಕ ಮೌಲ್ಯಾಂಕನದ ಭಾಗವಾಗಿ ಮಾಡಬಹುದು. | 15 | 22-09-2022<br>ರಿಂದ<br>24-09-2022 |
| **ಸಂಕಲನಾತ್ಮಕ ಮೌಲ್ಯಮಾಪನ -1**<br>ಈ ವರ್ಷ ಕಲಿಕಾ ಹಾಳೆಗಳಲ್ಲಿ ನಿಗದಿಪಡಿಸಿದ ಒಟ್ಟು ಕಲಿವಿನ ಫಲದ ಸಂಖ್ಯೆಗಳ ಶೇ 50 ರಷ್ಟು ಕಲಿಕಾಫಲಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸುವುದು. ಲಿಖಿತ ಪರೀಕ್ಷೆಯ ಪ್ರಶ್ನೆಗಳು ಸಾಮರ್ಥ್ಯ/ಕಲಿಕಾಫಲಗಳ ಗಳಿಕೆ ಪರೀಕ್ಷಿಸು ವಂತಿರಬೇಕೇ ಹೊರತು ವಿಷಯ/ಘಟಕ ಅಂಶವನ್ನಲ್ಲ.<br>1 ರಿಂದ 5ನೇ ತರಗತಿಗಳಿಗೆ: 20 ಲಿಖಿತ +20 ಮೌಖಿಕ = 40 ಅಂಕಗಳಿಗೆ ಪರೀಕ್ಷೆ ನಡೆಸಿ, ಇಂಗ್ಲೀಷ್ ಭಾಷೆಗೆ 10 ಲಿಖಿತ+30 ಮೌಖಿಕ=40 ಅಂಕಗಳಿಗೆ ಪರೀಕ್ಷೆ ನಡೆಸುವುದು. ಹಾಗೂ 20 ಅಂಕಗಳಿಗೆ ಪರಿವರ್ತಿಸುವುದು.<br>6 ರಿಂದ 8 ನೇ ತರಗತಿಗಳಿಗೆ: 30 ಲಿಖಿತ+10 ಮೌಖಿಕ=40 ಅಂಕಗಳಿಗೆ ಪರೀಕ್ಷೆ ನಡೆಸುವುದು.<br>9 ನೇತರಗತಿಗೆ ಹತ್ತನೆಯ ತರಗತಿಯ ಮಾದರಿಯಲ್ಲಿ ವೈಟೇಜ್ ನೀಡಿ ಪರೀಕ್ಷೆ ನಡೆಸುವುದು.<br>ಮೊದಲನೆಯ ಸಂಕಲನಾತ್ಮಕ ಪರೀಕ್ಷೆಯಲ್ಲಿ ಎರಡು ಹಂತದ ಪ್ರಶ್ನೆ ಪತ್ರಿಕೆ ತಯಾರಿಸಿಕೊಳ್ಳ ಬಹುದಾಗಿದೆ.<br>- ಮೊದಲ ಹಂತದಲ್ಲಿ ಚುರುಕಾಗಿ ಕಲಿಕಾ ಫಲಗಳನ್ನು | 20 | 17-10-2022<br>ರಿಂದ<br>25-10-2022 |

| | | |
|---|---|---|
| ಗಳಿಸಿದ ಮಕ್ಕಳಿಗೆ ಅನ್ವಯಿಸುವ ಪ್ರಶ್ನೆ ಪತ್ರಿಕೆ<br>- ನಂತರದ ಹಂತದಲ್ಲಿ ಕಲಿಕಾಫಲಗಳನ್ನು ಗಳಿಸಲು ಸಮಸ್ಯೆಯಾದ ತೀರ ಹಿಂದುಳಿದ ಮಕ್ಕಳಿಗೆ ಪ್ರತ್ಯೇಕ ಪ್ರಶ್ನೆ ಪತ್ರಿಕೆಯಲ್ಲಿ ಮೌಲ್ಯಾಂಕನ ಮಾಡಿ ಅವರ ಮಾನಸಿಕ ಸುರಕ್ಷತೆಯನ್ನು ಕಾಪಾಡುವುದು. | | |
| **ರೂಪಣಾತ್ಮಕ ಮೌಲ್ಯಾಂಕನ -3**<br>ರೂಪಣಾತ್ಮಕ ಮೌಲ್ಯಾಂಕನ -1ರಲ್ಲಿ ಹೇಳಿದಂತೆ ಕ್ರಮವಹಿಸಿರಿ | 15 | 26-12-2022<br>ರಿಂದ<br>28-12-2022 |
| **ರೂಪಣಾತ್ಮಕ ಮೌಲ್ಯಾಂಕನ -4**<br>ರೂಪಣಾತ್ಮಕ ಮೌಲ್ಯಾಂಕನ -2 ರಲ್ಲಿ ಹೇಳಿದಂತೆ ಕ್ರಮವಹಿಸಿರಿ. | 15 | 04-02-2023<br>ರಿಂದ<br>06-02-2023 |
| **ಸಂಕಲನಾತ್ಮಕ ಮೌಲ್ಯಮಾಪನ 2**<br>ಈ ವರ್ಷ ಕಲಿಕಾ ಹಾಳೆಗಳಲ್ಲಿ ನಿಗದಿಪಡಿಸಿದ ಒಟ್ಟು ಕಲಿವಿನ ಫಲದ ಸಂಖ್ಯೆಗಳ ಶೇ 50 ರಷ್ಟು ಕಲಿಕಾ ಫಲಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸುವುದು. (ಮೊದಲ ಸ.ಮೌ ಅಡಿ ಶೇ 50 ರಪರೀಕ್ಷೆಯಾಗಿರುತ್ತದೆ)<br>ಲಿಖಿತ ಪರೀಕ್ಷೆಯ ಪ್ರಶ್ನೆಗಳು ಸಾಮರ್ಥ್ಯ/ ಕಲಿಕಾಫಲ ಗಳ ಗಳಿಕೆ ಪರೀಕ್ಷಿಸುವಂತಿರಬೇಕೇ ಹೊರತು ವಿಷಯ/ ಘಟಕಾಂಶವನ್ನಲ್ಲ.<br>1 ರಿಂದ 5 ನೇ ತರಗತಿಗಳಿಗೆ: 20 ಲಿಖಿತ +20 ಮೌಖಿಕ= 40 ಅಂಕಗಳಿಗೆ ಪರೀಕ್ಷೆ ನಡೆಸಿ, ಇಂಗ್ಲೀಷ್ ಭಾಷೆಗೆ 10 ಲಿಖಿತ+30 ಮೌಖಿಕ= 40 ಅಂಕಗಳಿಗೆ ಪರೀಕ್ಷೆ ನಡೆಸುವುದು. ಹಾಗೂ 20 ಅಂಕಗಳಿಗೆ ಪರಿವರ್ತಿಸುವುದು.<br><br>6 ರಿಂದ 8ನೇ ತರಗತಿಗಳಿಗೆ: 30 ಲಿಖಿತ+10 ಮೌಖಿಕ=40 ಅಂಕಗಳಿಗೆ ಪರೀಕ್ಷೆ ನಡೆಸುವುದು.<br>9 ನೇತರಗತಿಗೆ ಹತ್ತನೆಯ ತರಗತಿಯ ಮಾದರಿಯಲ್ಲಿ ವೈಟೇಜ್ ನೀಡಿ ಪರೀಕ್ಷೆ ನಡೆಸುವುದು. | 20 | 01-04-2023<br>ರಿಂದ<br>05-04-2023 |
| ಫಲಿತಾಂಶ ಪ್ರಕಟಣೆ | ಒಟ್ಟು 100 ಅಂಕಗಳಿಗೆ | 1-8 ನೇ ತರಗತಿಗಳಿಗೆ ಸಮುದಾಯದತ್ತ ಶಾಲ ಕಾರ್ಯಕ್ರಮ ದಿನದಂದು ಫಲಿತಾಂಶ ಪ್ರಕಟಿಸುವುದು |

10 ನೇ ತರಗತಿಗಳಿಗೆ ಮೌಲ್ಯಾಂಕನ ನಿರ್ವಹಣೆ ವೇಳಾಪಟ್ಟಿ :

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
| --- | --- | --- |
| ರೂಪಣಾತ್ಮಕ ಮೌಲ್ಯಾಂಕನ -1 (2 ಚಟುವಟಿಕೆ (15+15 ಅಂಕಗಳು) 1 ಪೆನ್-ಪೇಪರ್‌ಟೆಸ್ಟ್ (20 ಅಂಕಗಳು) ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು) | 20 | ಜುಲೈ 2022 (ಪೂರ್ಣ ತಿಂಗಳು) |
| ರೂಪಣಾತ್ಮಕ ಮೌಲ್ಯಾಂಕನ -2 (2 ಚಟುವಟಿಕೆ (15+15 ಅಂಕಗಳು) 1 ಪೆನ್-ಪೇಪರ್‌ಟೆಸ್ಟ್ (20 ಅಂಕಗಳು) ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು) | 20 | 06-09-2022 ರಿಂದ 08-09-2022 |
| ರೂಪಣಾತ್ಮಕ ಮೌಲ್ಯಾಂಕನ -3 (2 ಚಟುವಟಿಕೆ (15+15 ಅಂಕಗಳು) 1 ಪೆನ್-ಪೇಪರ್‌ಟೆಸ್ಟ್ (20 ಅಂಕಗಳು) ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು) | 20 | 28-10-2022 ರಿಂದ 30-10-2022 |
| ರೂಪಣಾತ್ಮಕ ಮೌಲ್ಯಾಂಕನ -4 (2 ಚಟುವಟಿಕೆ (15+15 ಅಂಕಗಳು) 1 ಪೆನ್-ಪೇಪರ್‌ಟೆಸ್ಟ್ (20 ಅಂಕಗಳು) ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು) | 20 | 13-12-2022 ರಿಂದ 15-12-2022 |
| ಆಂತರಿಕ ಮೌಲ್ಯಮಾಪನ: 9 ಮತ್ತು 10 ನೇ ತರಗತಿಗಳಿಗೆ 50 ಅಂಕಗಳಿಗೆ ನಡೆಸಿರುವ ಪ್ರತಿ ರೂಪಣಾತ್ಮಕ ಮೌಲ್ಯಮಾಪನವನ್ನು | 20 | 27-01-2023 ರಿಂದ 29-01-2023 |

| | | |
|---|---|---|
| ಒಳಗೊಂಡಂತೆ ಒಟ್ಟು 4 ರೂಪಣಾತ್ಮಕ ಮೌಲ್ಯಮಾಪನಗಳ ಒಟ್ಟು 200 ಅಂಕಗಳ ಸರಾಸರಿಯನ್ನು 20 ಅಂಕಗಳಿಗೆ ಪರಿವರ್ತಿಸಿ ಆಂತರಿಕ ಮೌಲ್ಯಮಾಪನಕ್ಕೆ ಪರಿಗಣಿಸುವುದು. | | |
| 10 ನೇ ತರಗತಿ<br>ಪೂರ್ವ ಸಿದ್ಧತಾ ಪರೀಕ್ಷೆ (80 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ಮಂಡಳಿ ನಿಗದಿ ಪಡಿಸಿದ ದಿನಾಂಕದಂದು ನಡೆಸುವುದು) | 100 | |
| ಫಲಿತಾಂಶ ಪ್ರಕಟಣೆ | ಒಟ್ಟು 100 ಅಂಕಗಳು | |

**ಸೂಚನೆಗಳು:**

1. ಮೌಲ್ಯಾಂಕನ ಕಾರ್ಯವನ್ನು ನಿರ್ವಹಿಸಿ ಸಾಂದರ್ಭಿಕವಾಗಿ ಸೃಜನೆಯಾಗುವ ಅಗತ್ಯ ದಾಖಲಾತಿಗಳನ್ನು ಮಕ್ಕಳ ಕೃತಿ ಸಂಪುಟದಲ್ಲಿ ಸಂಗ್ರಹಿಸಿ ಇಡುವುದು.
2. ನಿಗದಿಪಡಿಸಿದ ಸಮಯದಲ್ಲಿ ಮೌಲ್ಯಾಂಕನ ಚಟುವಟಿಕೆಗಳನ್ನು ಕೈಗೊಳ್ಳುವುದು. ಯಾವುದೇ ಕಾರಣದಿಂದ ಮಗು ಆ ಸಮಯಕ್ಕೆ ಅಲಭ್ಯವಾದಲ್ಲಿ ಸಾಂದರ್ಭಿಕವಾಗಿ ನಡೆಸಿ. ಮಕ್ಕಳ ಕೃತಿ ಸಂಪುಟದಲ್ಲಿ ದಾಖಲಿಸಿರುವ ಚಟುವಟಿಕೆಗಳೊಂದಿಗೆ ಸಂಯೋಜನೆ ಮಾಡಿಕೊಂಡು ಆ ಮಗುವಿಗೆ ಮೌಲ್ಯಾಂಕನ ನಡೆಸುವುದು.
3. ವೈಯಕ್ತಿಕ ಅಂಕವಹಿ, ಕ್ರೋಢೀಕೃತ ಅಂಕವಹಿ ಶಿಕ್ಷಕರು ನಿರ್ವಹಿಸುವುದು.
4. ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಮಾಪನ ಕೈಗೊಳ್ಳುವ ಸಂದರ್ಭದಲ್ಲಿ ಲಿಖಿತ ಪರೀಕ್ಷೆಯನ್ನು ಕೈಗೊಳ್ಳುವಾಗ ಕೋವಿಡ್-19 ರ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು.
5. ಎಲ್ಲಾ ಶಿಕ್ಷಕರು ನಿರ್ವಹಿಸಿದ ವೈಯಕ್ತಿಕ ಅಂಕವಹಿಯನ್ನು ಶಾಲಾ ಮುಖ್ಯಶಿಕ್ಷಕರು ಪರಿಶೀಲಿಸುವುದು. ಶಾಲಾ ಹಂತದಲ್ಲಿ ಕ್ರೋಢೀಕೃತ ಅಂಕವಹಿ ಕಾಲ ಕಾಲಕ್ಕೆ ನಿರ್ವಹಣೆಯಾಗುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
6. ವೇಳಾಪಟ್ಟಿಯಂತೆ ಮೌಲ್ಯಾಂಕನ ಪೂರ್ಣಗೊಂಡ 5 ದಿನಗಳ ಒಳಗೆ ಮಕ್ಕಳ ಪ್ರಗತಿಯನ್ನು ಎಸ್.ಎ.ಟಿ.ಎಸ್ ನಲ್ಲಿ ಕಡ್ಡಾಯವಾಗಿ ನಮೂದಿಸುವುದು. ಬ್ಲಾಕ್ ಹಂತದಲ್ಲಿ ಸಿ.ಆರ್.ಪಿ, ಬಿ.ಆರ್.ಪಿ, ಇಸಿಒ, ಬಿ.ಐ.ಇ.ಆರ್.ಟಿ, ಬಿ.ಆರ್.ಸಿ ರವರು ಕ್ಲಸ್ಟರ್ ಗಳನ್ನು ಹಂಚಿಕೆ ಮಾಡಿಕೊಂಡು ಎಸ್.ಎ.ಟಿ.ಎಸ್ ನಲ್ಲಿ ಪ್ರತಿ ಶಾಲೆಯ ಮೌಲ್ಯಾಂಕನ ದಾಖಲಿಸಿರುವುದನ್ನು ಖಾತ್ರಿ ಪಡಿಸಿಕೊಂಡು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವರದಿ ಮಾಡುವುದು.

ಇದೇ ರೀತಿ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ರವರ ಕಛೇರಿಯ ಶಿಕ್ಷಣಾಧಿಕಾರಿಗಳು, ಡಿ.ವೈ.ಪಿ.ಸಿ, ಎ.ಪಿ.ಸಿ ರವರು, ವಿಷಯ ಪರಿವೀಕ್ಷಕರು, ಡಯಟ್ ನ ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರು, ಬ್ಲಾಕ್ ಗಳನ್ನು ಹಂಚಿಕೆ ಮಾಡಿಕೊಂಡು ಪ್ರತಿ ಮಾಹೆ ಸಭೆಯಲ್ಲಿ ಎಸ್.ಎ.ಟಿ.ಎಸ್ ನಲ್ಲಿ ಪ್ರತಿ ಶಾಲೆಯ ಮೌಲ್ಯಾಂಕನ ದಾಖಲಾಗಿರುವುದನ್ನು ಪರಿಶೀಲಿಸಿ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ವರದಿ ಮಾಡುವುದು.

ಉಳಿದಂತೆ ಉಲ್ಲೇಖ- 1, 2 ಮತ್ತು 3 ರ ಸುತ್ತೋಲೆಗಳಲ್ಲಿನ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತದೆ.

R. 04/05/2022.

(ಪಲ್ಲವಿ ಆಕುರಾತಿ)
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

( ಡಾ.ವಿಶಾಲ್ .ಆರ್ )
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ 29/4

ಗೆ,

1. ರಾಜ್ಯದ ಎಲ್ಲಾಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯಕ್ರಮಕ್ಕಾಗಿ.
3. ರಾಜ್ಯದಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.